# ಯುದ್ಧಭೂಮಿಯಲ್ಲಿ ಮಹಿಳೆ

ಮುಂಚೂಣಿಯ ಯುದ್ಧಭೂಮಿಯಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸುವುದು ಕೇವಲ ಲಿಂಗಸಮಾನತೆಯ ಪ್ರಶ್ನೆ ಮಾತ್ರವಲ್ಲ; ಅದು ಸೇನೆಯನ್ನು ಇನ್ನಷ್ಟು ಬಲಿಷ್ಠ ಮತ್ತು ಉತ್ತಮಗೊಳಿಸಲಿದೆ ಎನ್ನುವುದೂ ನಿಜ. ಅದಕ್ಕಾಗಿ ಸೇನೆಯ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳಬೇಕಿಲ್ಲ. ಈಗಾಗಲೆ ಮಹಿಳೆಯರಿಗೆ ಅವಕಾಶ ನೀಡಿರುವ ವಿದೇಶೀ ಸೇನೆಗಳಲ್ಲಿ ಈ ಸತ್ಯ ಸಾಬೀತಾಗಿದೆ.

ಸೇನಾ ದಂಡನಾಯಕ ಬಿಪಿನ್ ರಾವತ್ ಶುಭ ಸುದ್ದಿಯೊಂದನ್ನು ಪ್ರಕಟಿಸಿದ್ದಾರೆ. ಶೀಘ್ರವೇ ಸೇನೆಯಲ್ಲಿ ಯುದ್ಧಭೂಮಿಯ ಮುಂಚೂಣಿಯ ಕಾರ್ಯಾಚರಣೆಗೆ ಮಹಿಳೆಯರನ್ನು ನೇಮಕ ಮಾಡಿಕೊಳ್ಳುವುದಾಗಿ ಅವರು ಪ್ರಕಟಿಸಿದ್ದಾರೆ. ಭಾರತದ ಸೇನಾ ನೀತಿ ನಿಯಮಗಳ ಮಟ್ಟಿಗೆ ಇದು ಬಹುದೊಡ್ಡ ಬದಲಾವಣೆ ಎನ್ನಬಹುದು. ವರ್ಷದ ಹಿಂದೆ ಆಗಿನ ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ ಅವರು, ಮುಂಚೂಣಿಯ ಸೇನೆಗಳಲ್ಲಿ ಮಹಿಳೆಯರ ನೇಮಕಾತಿಯ ಪ್ರಸ್ತಾಪವನ್ನು ತಳ್ಳಿಹಾಕಿದ್ದರು. ಯುದ್ಧಭೂಮಿಯಲ್ಲಿ ಮಹಿಳೆಯರನ್ನು ನೇಮಕ ಮಾಡುವುದರ ಬಗ್ಗೆ ವಿರೋಧವೂ ವ್ಯಕ್ತವಾಗಿತ್ತು. ಈಗ ಹೊಸ ನೀತಿಯನ್ವಯ, ತಕ್ಷಣಕ್ಕೆ ಮೊದಲ ಹಂತದಲ್ಲಿ ಮಿಲಿಟರಿ ಪೊಲೀಸ್‌ಗೆ ಮಹಿಳೆಯರನ್ನು ನೇಮಕ ಮಾಡಲಾಗುವುದು ಎಂದು ರಾವತ್ ಸ್ಪಷ್ಟವಾಗಿ ಹೇಳಿದ್ದಾರೆ. ಬಳಿಕ ಸ್ವಲ್ಪ ತಡವಾಗಿ ಎಲ್ಲ ಮೂರು ಯುದ್ಧ ವಿಭಾಗಗಳ ಯುದ್ಧಭೂಮಿಯ ಮುಂಚೂಣಿಯ ಕಾರ್ಯಾಚರಣೆಗೂ ಮಹಿಳೆಯರಿಗೆ ಅವಕಾಶ ಕೊಡಲಾಗುವುದು ಎಂದಿದ್ದಾರೆ. ಎರಡು ದೃಷ್ಟಿಯಲ್ಲಿ ಇದು ಸ್ವಾಗತಾರ್ಹ. ಮಹಿಳೆಯರು ಎಲ್ಲ ರಂಗಗಳಲ್ಲೂ ಪುರುಷರಿಗೆ ಸರಿಸಮಾನವಾಗಿ ದುಡಿಯಬಲ್ಲರು ಎನ್ನುವುದನ್ನು ಸರ್ಕಾರ ಅಕ್ಷರಶಃ ಒಪ್ಪಿಕೊಂಡಿರುವುದು ಮೊದಲನೆಯದ್ದು. ಮಹಿಳೆಯರ ಶಕ್ತಿ, ಸಾಮರ್ಥ್ಯ, ದುಡಿಮೆಯ ಕ್ಷಮತೆಯನ್ನು ಒರೆಗೆ ಹಚ್ಚಲು ಇನ್ನೊಂದು ಪ್ರಮುಖ ಕ್ಷೇತ್ರ ಸಿಕ್ಕಿದೆ ಎನ್ನುವುದು ಎರಡನೆಯ ಆಯಾಮ.

ತೀರಾ ಇತ್ತೀಚಿನವರೆಗೂ ಭಾರತೀಯ ಸೇನೆಯಲ್ಲಿ ವೈದ್ಯಕೀಯ ಮತ್ತು ಶೈಕ್ಷಣಿಕ ಹುದ್ದೆಗಳಿಗೆ ಮಾತ್ರ ಮಹಿಳೆಯರಿಗೆ ಅವಕಾಶ ನೀಡಲಾಗುತ್ತಿದ್ದು, ಉಳಿದ ಸೇವೆಗಳಿಗೆ ಪ್ರವೇಶ ಇರಲಿಲ್ಲ. 90ರ ದಶಕದಲ್ಲಿ ವೈದ್ಯಕೀಯ ಮತ್ತು ಶೈಕ್ಷಣಿಕ ಹುದ್ದೆಗಳನ್ನು ಮಹಿಳೆಯರಿಗೆ ನೀಡಲು ಆರಂಭಿಸಲಾಯಿತು. ಅದೂ ಕೆಲವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಬಳಿಕ ಪಡೆದುಕೊಂಡ ನ್ಯಾಯ. ಇತ್ತೀಚೆಗೆ ಭಾರತೀಯ ವಾಯುಪಡೆ ಫೈಟರ್ ವಿಮಾನಗಳನ್ನು ಚಲಾಯಿಸಲು ಮೂವರು ಮಹಿಳೆಯರನ್ನು ಆಯ್ಕೆ ಮಾಡುವುದರ ಮೂಲಕ ಹೊಸ ಮನ್ವಂತರಕ್ಕೆ ನಾಂದಿ ಹಾಡಿತು. ಈ ಮೂವರೂ ಈಗ ತರಬೇತಿ ಪಡೆಯುತ್ತಿದ್ದಾರೆ. ಸೈನ್ಯದ ಮೂರೂ ವಿಭಾಗಗಳಿಗೆ ಮಹಿಳಾ ಅಧಿಕಾರಿಗಳನ್ನು ಪ್ರತಿವರ್ಷವೂ ಆಯ್ಕೆ ಮಾಡುತ್ತಿದ್ದು, ಅವರು ತಮ್ಮ ಸೇವಾದಕ್ಷತೆಯಲ್ಲಿ ಮತ್ತು ಬದ್ಧತೆಯಲ್ಲಿ ಪುರುಷರಿಗೆ ಯಾವ ರೀತಿಯಲ್ಲೂ ಕಡಿಮೆ ಇಲ್ಲ ಎಂದು ತೋರಿಸಿಕೊಟ್ಟಿದ್ದಾರೆ.

ಹಲವು ವಿದೇಶಗಳು ಸೈನ್ಯದ ಮುಂಚೂಣಿಯಲ್ಲಿ ಮಹಿಳೆಯರ ನೇಮಕಾತಿಯನ್ನು ಆರಂಭಿಸಿ ದಶಕಗಳೇ ಉರುಳಿವೆ. ಕೆನಡಾ 1989ರಲ್ಲೇ ಮಹಿಳೆಯರಿಗೆ ಸೈನ್ಯದ ಎಲ್ಲ ವಿಭಾಗಗಳನ್ನೂ ಮುಕ್ತವಾಗಿಟ್ಟ ದೇಶ. 90ರ ದಶಕದಲ್ಲಿ ಇಸ್ರೇಲ್, 2001ರಲ್ಲಿ ಜರ್ಮನಿ, 2013ರಲ್ಲಿ ಅಮೆರಿಕ ಮತ್ತು 2016ರಲ್ಲಿ ಯುನೈಟೆಡ್ ಕಿಂಗ್‌ಡಮ್ ಯುದ್ಧಭೂಮಿಯ ಮುಂಚೂಣಿಯ ಸ್ಥಾನಗಳಿಗೆ ಮಹಿಳೆಯರ ನೇಮಕಾತಿ ನಡೆಸಿದವು. ಆ ಎಲ್ಲ ದೇಶಗಳ ಸೇನೆಗಳಲ್ಲೂ ಮಹಿಳೆಯರು ಪುರುಷರಿಗೆ ಸರಿಸಮಾನರಾಗಿ ದಕ್ಷತೆಯಿಂದ ದುಡಿಯುತ್ತಿದ್ದಾರೆ. ಭಾರತದ ಸೇನೆ ಈಗ ತಡವಾಗಿಯಾದರೂ ನಿರ್ಧಾರ ಕೈಗೊಂಡಿರುವುದು ಗಮನಾರ್ಹ.

ದೇಶದ ರಕ್ಷಣೆಗೆ ಸಂಬಂಧಿಸಿರುವ ಹಿನ್ನೆಲೆಯಲ್ಲಿ ಸೇನೆಯ ಉದ್ಯೋಗಗಳಲ್ಲಿ ಯಾವುದೇ ರೀತಿಯ ತಾರತಮ್ಯ ನೀತಿಯನ್ನು ಅನುಸರಿಸಲಾಗದು ಎನ್ನುವುದು ನಿಜ. ಸೇನೆಗೆ ಸೇರುವ ಮಹಿಳೆಯರು ಕೆಲಸದ ವಿಷಯದಲ್ಲಿ ಅಂತಹ ಯಾವ 'ಉದಾರತೆ'ಯನ್ನೂ ನಿರೀಕ್ಷಿಸಲಾಗದು. ಮಹಿಳೆಯರು ಅಂತಹ ಉದಾರತೆಯನ್ನು ನಿರೀಕ್ಷಿಸುತ್ತಾರೆ ಎನ್ನುವುದು ನಮ್ಮಲ್ಲಿರುವ ತಪ್ಪು ಕಲ್ಪನೆ. ಅವಕಾಶ ಕೊಟ್ಟ ಬಳಿಕವಷ್ಟೇ ಅವರು ಅದನ್ನು ಸಾಬೀತು ಮಾಡಬಲ್ಲರು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಮುಂಚೂಣಿಯ ಯುದ್ಧಭೂಮಿಯಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸುವುದು ಕೇವಲ ಲಿಂಗಸಮಾನತೆಯ ಪ್ರಶ್ನೆ ಮಾತ್ರವಲ್ಲ; ಅದು ಸೇನೆಯನ್ನು ಇನ್ನಷ್ಟು ಬಲಿಷ್ಠ ಮತ್ತು ಉತ್ತಮಗೊಳಿಸಲಿದೆ ಎನ್ನುವುದೂ ನಿಜ. ಅದಕ್ಕಾಗಿ ಸೇನೆಯ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳಬೇಕಿಲ್ಲ. ಈಗಾಗಲೆ ಮಹಿಳೆಯರಿಗೆ ಅವಕಾಶ ನೀಡಿರುವ ವಿದೇಶೀ ಸೇನೆಗಳಲ್ಲಿ ಈ ಸತ್ಯ ಸಾಬೀತಾಗಿದೆ. ಭಾರತೀಯ ಮಹಿಳೆಯರೂ ಅದನ್ನು ಸಾಬೀತುಪಡಿಸಲು ಸಿದ್ಧರಿದ್ದಾರೆ. ಅಷ್ಟಕ್ಕೂ ತರಬೇತಿಯ ಹಂತದಲ್ಲೇ ಕಠಿಣ ಸವಾಲುಗಳು ಇರುವುದರಿಂದ ಅಂತಿಮವಾಗಿ ಯುದ್ಧಭೂಮಿಯಲ್ಲಿ ತೊಂದರೆಯಾಗುತ್ತದೆ ಎನ್ನುವ ಭಾವನೆ ಇಟ್ಟುಕೊಳ್ಳುವ ಅಗತ್ಯವೂ ಇಲ್ಲ.


ಈಶ್ವರ್

■ ಬಿ.ಎಂ.ಹನೀಫ್